ದಿನಾಂಕಃ 03.07.2019 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

ಪಾಟೀಸವಾಲುಃ ಪ್ರತಿವಾದಿ ಪರ ಶ್ರೀ ಟಿ.ಎನ್.ಎಸ್ ವಕೀಲರಿಂದಃ

ನನ್ನ ತಂದೆ ವ್ಯವಸಾಯ ಮಾಡುತ್ತಿದ್ದರು. ನನ್ನ ಮನೆಯ ಯಜಮಾನರು ಯಾರು ಎಂದರೆ ನನ್ನ ತಂದೆಗೆ ವಯಸ್ಸಾಗಿದ್ದು, ಮನೆಯ ವ್ಯವಹಾರವನ್ನು ನಾನೇ ನೋಡಿಕೊಳ್ಳುತ್ತೇನೆ ಎಂದು ಹೇಳುತ್ತಾರೆ. ಆರ್. ಎ . ನಂ. 142/2016 ಇದೇ ದಾವಾ ಆಸ್ತಿಯ ಮೇಲೆ ಈಗಲೂ ಕೂಡ ಸಾಲ್ತಿಯಲ್ಲಿರುತ್ತದೆ ಎಂದರೆ ನಿಜ. ಆ ಮೇಲ್ಮನವಿಯಲ್ಲಿ ನಾನು ನನ್ನ ತಂದೆಯ ಪರವಾಗಿ ಮುಕ್ತಾರುನಾಮೆಯನ್ನು ಸಲ್ಲಿಸಿರುವುದಿಲ್ಲ. ಈ ದಾವೆಯಲ್ಲಿ ಹಾಜರುಪಡಿಸಿದ ಎಲ್ಲಾ ದಾಖಲೆಗಳನ್ನು ಈ ಮೊದಲು ಹೂಡಿದ ದಾವೆ ಒ.ಎಸ್. 222/14 ರಲ್ಲಿ ನನ್ನ ತಂದೆ ಸಲ್ಲಿಸಿದ ದಾಖಲೆಗಳು ಎಂದರೆ ನಿಜ. ಆ ದಾವೆ ಎಲ್ಲಾ ದಾಖಲೆಗಳನ್ನು ಪರಿಗಣಿಸಿದ ಮೇಲೆ ನನ್ನ ತಂದೆ ಆ ದಾವೆಯ ದಾವಾ ಆಸ್ತಿಯ ಸ್ವಾಧೀನತೆ ಹೊಂದಿಲ್ಲ ಎಂದು ಈ ನ್ಯಾಯಾಲಯ ವಜಾ ಮಾಡಿರುತ್ತದೆ ಎಂದರೆ ನಿಜ.

ಒ.ಎಸ್. 222/14 ರ ಆದೇಶದ ವಿರುದ್ಧ ನನ್ನ ತಂದೆ ಆರ್.ಎ. ನಂ. 142/16 ನ್ನು ಹೂಡಿರುತ್ತಾರೆ ಎಂದರೆ ನಿಜ. ಒ.ಎಸ್. 222/14 ರಲ್ಲಿ ನನ್ನ ತಂದೆ ದಾವಾ ಆಸ್ತಿಯ ಸ್ವಾಧೀನತೆ ಹೊಂದಿಲ್ಲ ಎಂದು ತೀರ್ಪು ನೀಡಿದ್ದರೂ ಸಹ ಈಗ ಈ ದಾವೆಯನ್ನು ನಾನು ದಾವಾ ಆಸ್ತಿಯ ಸ್ವಾಧೀನತೆ ಹೊಂದಿರುತ್ತೇನೆ ಎಂದು ಹೇಳಿ ಹೂಡಿರುತ್ತೇನೆ ಎಂದರೆ ನಿಜ. ನನ್ನ ತಂದೆ ನ್ಯಾಯಾಲಯಕ್ಕೆ ಬಂದು ಸಾಕ್ಷ್ಯ ಕೊಟ್ಟರೇ ಸತ್ಯಾಂಶ ಹೊರಗೆ ಬರುತ್ತದೆ ಎಂದು ನಾನು ಸುಳ್ಳು ಸಾಕ್ಷ್ಯ ಹೇಳಲು ಬಂದಿರುತ್ತೇನೆ ಎಂದರೆ ಸರಿಯಲ್ಲ.

ನನ್ನ ತಂದೆ ಆರೋಗ್ಯವಾಗಿದ್ದು, ಅವರನ್ನು ನ್ಯಾಯಾಲಯಕ್ಕೆ ಬರದ ಹಾಗೇ ಮಾಡಿ ನಾನು ಅವರ ಕಡೆಯಿಂದ ಸುಳ್ಳು ಮೊಕ್ತಾರುನಾವೆಯನ್ನು ಪಡೆದಿರುತ್ತೇನೆ ಎಂದರೆ ಸರಿಯಲ್ಲ. ನಾನು ಹಾಜರು ಪಡೆಸಿದ ಎಲ್ಲಾ ದಾಖಲೆಗಳನ್ನು ನಾನು ಓ ದಿರುತ್ತೇನೆ. ನಾನು ನಿ.ಪಿ. 50 ನ್ನು ಓದಿರುತ್ತೇನೆ. 1928 ರಲ್ಲಿ ಅರ್ಪಿ ವೆಂಕಟರವಣಪ್ಪ ಅವರ 5 ಜನ ಮಕ್ಕಳು ಭಾಗ ಆಗಿರುತ್ತಾರೆ. ನಿ.ಪಿ. 50 ರ ಮೊದಲು ವಿಭಾಗ ಮಾಡಿಕೊಂಡಿರುತ್ತಾರೋ ಅಥವಾ ನಂತರ ವಿಭಾಗ ಮಾಡಿಕೊಂಡಿರುತ್ತಾರೋ ಎಂದರೆ ನಿ.ಪಿ. 50 ರಲ್ಲಿಯೇ ವಿಭಾಗ ಮಾಡಿಕೊಂಡಿರುತ್ತಾರೆ. ನಿ.ಪಿ. 50 ವಿಭಾಗ ಪತ್ರ ಹಾಗೂ ಬೋಗ್ಯ ಪತ್ರ ಎರಡು ಆಗಿರುತ್ತದೆ. ಅರ್ಪಿ ವೆಂಕಟರವಣಪ್ಪ ಅವರ 5 ಜನ ಮಕ್ಕಳಿಗೆ ವಿಭಾಗದಲ್ಲಿ ತಲಾ 23 ಗುಂಟೆ ಜಮೀನು ಸರ್ವೆ ನಂ. 44 ರಲ್ಲಿ ಬಂದಿದ್ದು, 1 ರಿಂದ 3 ಹಿಸ್ಸೆಗಳಿಗೆ ಚೆಕ್ಕುಬಂದಿ ಇರುತ್ತದೆ. ಪತ್ರದಲ್ಲಿ 3 ಹಿಸ್ಸೆ ಕೂಡಿ ಒಂದೇ ಚೆಕ್ಕುಬಂದಿ ತೋಸಿರುತ್ತಾರೆ. 3 ಹಿಸ್ಸೆಗೆ ಪೂರ್ವಕ್ಕೆ ಸರ್ಕಾರಿ ದಾರಿ, ಉತ್ತರಕ್ಕೆ ರೇವಣ್ಣನ ಹೊಲ, ದಕ್ಷಿಣಕ್ಕೆ ಕ್ಯಾಲನೂರು ಶ್ರೀಕಂಠ ಶಾಸ್ತ್ರಿ ರವರ ಇನಾಮ್ತಿ ಆಸ್ತಿ, ಪಶ್ಚಿಮಕ್ಕೆ ಸೊಣ್ಣಪ್ಪ ಮತ್ತು ಈರಪ್ಪ ಅವರ ಆಸ್ತಿ ಇದೆ.

ಭೋಗ್ಯವನ್ನು ನಂಜಪ್ಪ ಮತ್ತು ಅವರ ಮಗ ನಾರಾಯಣಪ್ಪ ಮತ್ತು ವೆಂಕಟಪ್ಪ ಮಾಡಿಕೊಟ್ಟಿರುತ್ತಾರೆ. ಈ ಮೂರು ಜನ ಸೇರಿ ಸೊಣ್ಣಪ್ಪ ಮತ್ತು ಈರಪ್ಪ ಅವರಿಗೆ ಭೋಗ್ಯ ಮಾಡಿಕೊಟ್ಟಿರುತ್ತಾರೆ. ನಿ.ಪಿ. 50 ರಲ್ಲಿ ಸೊಣ್ಣಪ್ಪ ಮತ್ತು ಈಗಪ್ಪ ಅವರಿಗೆ ಮೇಲೆ ಹೇಳಿದ 3 ಜನ ಆಸ್ತಿಯನ್ನು ಬೋಗ್ಯ ಮಾಡಿ ಆಸ್ತಿಯನ್ನು ಸ್ವಾಧೀನತೆಯನ್ನು ಕೊಟ್ಟಿರುತ್ತಾರೆ ಎಂದು ಬರೆಯಲಾಗಿದೆ. ಮೇಲೆ

ಹೇಳಿದ ಮೂರು ಜನ ಬೋಗ್ಯದ ಆಸ್ತಿಯನ್ನು ಸೊಣ್ಣಪ್ಪ ಮತ್ತು ಈರಪ್ಪ ಅವರ ಸ್ವಾಧೀನತೆಗೆ ಕೊಟ್ಟಿರುತ್ತಾರೆ.

ನಿ.ಫಿ 51 ರ ಪ್ರಕಾರ ಈರಪ್ಪ ಬೋಗ್ಯದ ಆಸ್ತಿಯಲ್ಲಿ ತನ್ನ ಹಿಸ್ಸೆಯ ಹಕ್ಕನ್ನು ಸೊಣ್ಣಪ್ಪನಿಗೆ ಬಿಟ್ಟುಕೊಟ್ಟಿರುತ್ತಾರೆ ಎಂದರೆ ನಿಜ. ಅಂದರೆ ಸೊಣ್ಣಪ್ಪ ಅವರಿಗೆ 5 ಜನ ಸಹೋದರರಲ್ಲಿ 4 ಹಿಸ್ಸೆ ಆಸ್ತಿಯ ಬೋಗ್ಯದ ಹಕ್ಕು ಬಂದಿರುತ್ತದೆ ಎಂದರೆ ನಿಜ. ಅಂದರೆ 4 ಹಿಸ್ಸೆ ಆಸ್ತಿಗಳು ಸೊಣ್ಣಪ್ಪನ ಸ್ವಾಧೀನತೆಗೆ ಬಂದಿರುತ್ತದೆ ಎಂದರೆ ನಿಜ. ಈರಪ್ಪನ ಹಿಸ್ಸೆ ಸರ್ವೆ ನಂ.44/1 ಎಂದು ಪೋಡಿ ಆಗಿರುತ್ತದೆ ಎಂದರೆ ನಿಜ. ಅದು 1937 ರಲ್ಲಿ ಪೋಡಿಯಾಗಿರುತ್ತದೆ. ನಿ.ಪಿ. 50 ಬೋಗ್ಯ ಪತ್ರ 1943 ರಲ್ಲಿ ಪತ್ರದ ಮುಖಾಂತರ ಬಿಡುಗಡೆಯಾಗಿರುತ್ತದೆ. ಸೊಣ್ಣಪ್ಪನಿಗೆ ಬೋಗ್ಯ ಬಿಡುಗಡೆಯಾಗಿರುವ ಪತ್ರ ಯಾವುದು ಎಂದರೆ ಅದು ನಿ.ಪಿ. 70 ಆಗಿರುತ್ತದೆ ಎಂದು ಹೇಳುತ್ತಾರೆ. ನಿ.ಪಿ. 70ನ್ನು ಹೊರತು ಪಡಿಸಿ ಸೊಣ್ಣಪ್ಪನಿಂದ ಬೋಗ್ಯ ಬಿಡುಗಡೆಯಾಗಿರುವ ಬಗ್ಗೆ ಬೇರೆ ಯಾವುದೇ ದಾಖಲೆ ಇರುವುದಿಲ್ಲ.

ನಿ.ಪಿ. 70 ಅರ್ಕಿವೆಂಕಟರವಣಪ್ಪ ಅವರಿಂದ ಆದ ಮ್ಯೂಟೇಷನ್ ದಾಖಲೆ ಎಂದರೆ ಅದರಲ್ಲಿ ಸೊಣ್ಣಪ್ಪನ ಹೆಸರಿಗೆ ಬೋಗ್ಯ ಬಿಡುಗಡೆಯಾಗಿರುವ ಬಗ್ಗೆ ನಮೂದನೆ ಇರುತ್ತದೆ. ನಾನು ಹಾಜರುಪಡಿಸಿದ ಯಾವುದೇ ದಾಖಲೆಗಳಲ್ಲಿ ಸೊಣ್ಣಪ್ಪನ ಹೆಸರಿಗ ಬೋಗ್ಯ ಬಿಡುಗಡೆಯಾಗಿರುವ ಬಗ್ಗೆ ನಮೂದು ಇಲ್ಲ ಎಂದರೆ ಸರಿಯಲ್ಲ. ನಿ.ಪಿ. 70 ರಲ್ಲಿ ಸೊಣ್ಣಪ್ಪನಿಂದ ಅವರ ಸಹೋದರರಿಗೆ ಬೋಗ್ಯ ಬಿಡುಗಡೆಯಾಗಿರುವ ಬಗ್ಗೆ ನಮೂದು ಇರುತ್ತದೆ.

ಸೊಣ್ಣಪ್ಪನಿಗೆ ಕೊಟ್ಟ ಆಸ್ತಿಯ ಸ್ವಾಧೀನತೆಯನ್ನು ಹಿಂಪಡೆದಿದ್ದರ ಬಗ್ಗೆ ನಿ.ಪಿ. 53 ದಾಖಲೆ ಇರುತ್ತದೆ. ನಿ.ಪಿ. 53 ರನ್ನು ವೆಂಕಟಪ್ಪ ಅವರು ಹಸರತ್‌ಬೇಗ್ ಅವರಿಗೆ ಬರೆದುಕೊಟ್ಟ ಬೋಗ್ಯ ಪತ್ರವಾಗಿರುತ್ತದೆ. ನಿ.ಪಿ. 53 ಕ್ಕೆ ಸೊಣ್ಣಪ್ಪ ಅವರ ಸಹಿ ಇರುವುದಿಲ್ಲ. 1928 ರಲ್ಲಿ ಸೊಣ್ಣಪ್ಪನಿಗೆ 5 ರಲ್ಲಿ 4 ಹಿಸ್ಸೆ ಬಂದಿರುವ ಜಮೀನು ಮತ್ತೆ ಎಲ್ಲಿಗೂ ಹೋಗಿರುವುದಿಲ್ಲ ಮತ್ತು ಅವರ ತಮ್ಮಂದಿರಿಗೆ ಆ 4 ಹಿಸ್ಸೆಯ ಸ್ವಾಧೀನತೆ ಹೋಗಿಲ್ಲ ಮತ್ತು ಇದುವರೆಗೂ ಬೋಗ್ಯ ಬಿಡುಗಡೆಯಾಗಿರುವುದಿಲ್ಲ ಎಂದರೆ ಸರಿಯಲ್ಲ.

ನಿ.ಪಿ. 53 ಆಗುವಾಗ ಅರ್ಶಿ ವೆಂಕಟಪ್ಪ ಅವರ ಸಹೋದರರು ತೀರಿಕೊಂಡಿರುತ್ತಾರೆ. ಅರ್ಶಿ ನಾರಾಯಣಪ್ಪ ಅವರಿಗೆ ಮಕ್ಕಳು ಇರುವುದಿಲ್ಲ, ಅರ್ಶಿ ನಂಜಪ್ಪ ಅವರಿಗೆ ಎಷ್ಟು ಮಕ್ಕಳು ಇರುತ್ತಾರೆ ನೆನಪಿಲ್ಲ. ಅರ್ಶಿ ನಂಜಪ್ಪ ಅವರಿಗೆ ನಾರಾಯಣಪ್ಪ ಎಂಬ ಮಗ ಇದ್ದು, ಈಗಲೂ ಸಹ ಊರಿನಲ್ಲಿರುತ್ತಾರೆ ಎಂದರೆ ನಿಜ. ಭಾಗದಲ್ಲಿ ವೆಂಕಟಪ್ಪ ಅವರ ಭಾಗಕ್ಕೆ 23 ಗುಂಟೆ ಜಮೀನು ಬಂದಿರುತ್ತದೆ. ಆದರೆ ಅವರೆಲ್ಲರೂ 3 ಹಿಸ್ಸೆ ಕೂಡಿಯಾಗಿ ಇದ್ದರು.

ದಿಃ 14.04.1943 ರಲ್ಲಿ ಅರ್ಶಿ ವೆಂಕಟಪ್ಪ ಅವರ ಸಹೋದರರು ತೀರಿಕೊಂಡಿರುವ ಬಗ್ಗೆ ದಾಖಲೆ ಇಲ್ಲ. ನಿ.ಪಿ. 10 ರಲ್ಲಿ ಅರ್ಶಿ ವೆಂಕಟಪ್ಪ ಅವರು ತಮ್ಮ ಸಹೋದರರ ಹೆಸರಿಗೆ ಸೇರಿದ ಆಸ್ತಿಯನ್ನು ಬೋಗ್ಯ ಮಾಡಿ ಕೊಡುತ್ತಿರುವ ಬಗ್ಗೆ ನಮೂದು ಇದೆ. ನಿ.ಪಿ. 10 ನ್ನು ಅರ್ಶಿ ವೆಂಕಟಪ್ಪ ಅವರ ಸಹೋದರರ ಪರವಾಗಿ ಕೂಡ ಬರೆದುಕೊಟ್ಟಿರುತ್ತಾರೆ. ನಿ.ಪಿ. 10 ಕ್ಕೆ ಅರ್ಶಿ ವೆಂಕಟಪ್ಪ ಅವರ ಸಹೋದರರಾಗಲೀ ಅಥವಾ ಅವರ ಮಕ್ಕಳಾಗಲೀ ಸಹಿ ಮಾಡಿರುವುದಿಲ್ಲ. 1943 ಲ್ಲಿ ಅರ್ಶಿ ವೆಂಕಟಪ್ಪ ಅವರ ಸಹೋದರರು ಬದುಕಿದ್ದರು

ಎಂದರೆ ಸರಿಯಲ್ಲ. ಅರ್ಜಿ ಸೊಣ್ಣಪ್ಪ ಅವರು ಕೆ.ಎಂ. ನಂಜುಂಪ್ಪ ಅಲಿಯಾಸ್ ಚಿಕ್ಕಪಿಳ್ಳಪ್ಪ ಅವರಿಗೆ ಸರ್ವೆ ನಂ. 44/2 ರಲ್ಲಿ 2 ಎಕರೆ 11 ಗುಂಟೆ ಜಮೀನನ್ನು ದಿಃ 25.08.1949 ರಲ್ಲಿ ಬೋಗ್ಯ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಅದೇ ಪತ್ರದಲ್ಲಿ ತನ್ನ ಅಣ್ಣನ ಈರಪ್ಪನ ಆಸ್ತಿಯನ್ನು ಖರೀದಿ ಮಾಡಿ ಬೋಗ್ಯ ಮಾಡಲಾಗಿದೆ ಎಂದು ಬರೆದಿರುತ್ತಾರೆ ಎಂದರೆ ಪೂರ್ವಕ್ಕೆ ತಮ್ಮನ ಆಸ್ತಿಯ ಚೆಕ್ಕುಬಂದಿಯನ್ನು ತೋರಿಸಿರುತ್ತಾರೆ.

ದಿಃ 25.08.1949 ರ ಬೋಗ್ಯ ಪತ್ರವನ್ನು ನಾನು ಓದಿದ್ದು, ಅದರ ಪತ್ರ ನನ್ನ ಕಡೆ ಇದೆ. ನಾನು ನೋಡಿರುತ್ತೇನೆ. ಆ ಪತ್ರದಲ್ಲಿ ಸರ್ವೆ ನಂ. 44/2 ರಲ್ಲಿ 23 ಗುಂಟೆ ಜಮೀನನ್ನು ಬೋಗ್ಯ ಮಾಡಲಾಗಿದೆ ಎಂದು ಬರೆಯಲಾಗಿದೆ. ಸರ್ವೆ ನಂ. 44/2 ರಲ್ಲಿ 23 ಗುಂಟೆ ಜಮೀನನ್ನು ಬೋಗ್ಯ ಮಾಡಲಾಗಿದೆ ಎಂದು ಹೇಳುವ ದಾಖಲೆಯನ್ನು ಯಾವ ಕಾರಣಕ್ಕಾಗಿ ನ್ಯಾಯಾಲಯಕ್ಕೆ ಹಾಜರು ಪಡೆಸಿಲ್ಲ ಎಂದರೆ ಆ ಪತ್ರದಲ್ಲಿ 2 ಎಕರೆ 11 ಗುಂಟೆ ಜಮೀನು ಎಂದು ಬರೆಯಲಾಗಿದೆ ಎಂದು ಹೇಳುತ್ತಾರೆ. ಆದರೆ ಚೆಕ್ಕುಬಂದಿ ಮಾತ್ರ 1 ಹಿಸ್ಸೆಗೆ ಎಂದು ಬರೆಯಲಾಗಿದೆ. ಆ ಪತ್ರದಲ್ಲಿ ಚೆಕ್ಕುಬಂದಿ ಪೂರ್ವಕ್ಕೆ ವೆಂಕಟಪ್ಪನ 3 ಹಿಸ್ಸೆ, ಪಶ್ಚಿಮಕ್ಕೆ ಗೋಪಾಲಪ್ಪನ ಆಸ್ತಿ. ದಕ್ಷಿಣಕ್ಕೆ ದಸ್ತಗಿರಿಸಾಬ್ ಅವರ ಆಸ್ತಿ, ಸಾಕ್ಷಿ ಮುಂದುವರೆದು ಚಿಕ್ಕ ಮುನಿಸ್ವಾಮಿ ಅವರ ಆಸ್ತಿ ಎಂದು ಹೇಳುತ್ತಾರೆ. ಉತ್ತರಕ್ಕೆ ನಂಜಮ್ಮ ಮತ್ತು ರೇವಣ್ಣ ಇವರ ಆಸ್ತಿ ಎಂದು ಹೇಳುತ್ತಾರೆ. 2 ಹಿಸ್ಸೆಯನ್ನು ಅರ್ಜಿ ವೆಂಕಟಪ್ಪ ಅವರಿಗೆ ಯಾವ ದಾಖಲೆಯ ಮುಖಾಂತರ ಅವರ ಸಹೋದರರು ಬಿಟ್ಟುಕೊಟ್ಟಿರುತ್ತಾರೆ ನೆನಪಿಲ್ಲ. ನಿ.ಪಿ. 53 ರಲ್ಲಿ ಅರಿಟ ವೆಂಕಟಪ್ಪ

ಅವರ ಇಬ್ಬರು ಸಹೋದರರು ತಮ್ಮ 3 ಹಿಸ್ಸೆಯನ್ನು ಅರ್ಪಿ ವೆಂಕಟಪ್ಪ ಅವರಿಗೆ ಬಿಟ್ಟುಕೊಟ್ಟಿರುತ್ತಾರೆ ಎಂದು ಬರೆಯಲಾಗಿದೆ.

ಮುಂದುವರೆದ ಪಾಟೀ ಸವಾಲಿಗೆ ಸಮಯವನ್ನು ಕೋರಿದ್ದು ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇದೆ

Sd/-
ಪ್ರಧಾನ ಸಿವಿಲ್ ನ್ಯಾಯಾಧೀಶರು
ಹಾಗೂ ಜೆಎಂಎಫ್‌ಸಿ, ಚಿಂತಾಮಣಿ.